# ಬಾಪೂಜಿನಗರ ವಾರ್ಡ್ ಸಂಖ್ಯೆ: 134 ರ ವಾರ್ಡ್ ಸಮಿತಿ ಸಭೆ ನಡವಳಿಗಳು

ಶ್ರೀ. ನಿಶಾಂತ್ ನೋಡಲ್ ಅಧಿಕಾರಿ ಯರವರ ಘನ ಅಧ್ಯಕ್ಷತೆಯಲ್ಲಿ ದಿ:20.03.2021 ರಂದು ಮಧ್ಯಾಹ್ನ ಬಾಪೂಜಿನಗರ ವಾರ್ಡ್ ಸಂಖ್ಯೆ: 134 ರ ಸಮಿತಿ ಸಭೆಯನ್ನು ನಡೆಸಲಾಯಿತು. ಸಮಿತಿಗೆ ಕೆಳಕಂಡ ಸದಸ್ಯರು ಹಾಜರಿರುತ್ತಾರೆ.

## ಸಭೆಗೆ ಹಾಜರಿದ್ದ ಅಧಿಕಾರಿಗಳು

| ಕ್ರಸಂ | ಹೆಸರು | ಹುದ್ದೆ |
|---|---|---|
| 1. | ಶ್ರೀ. ನಿಶಾಂತ್ ನೋಡಲ್ ಅಧಿಕಾರಿ | ಅಧ್ಯಕ್ಷರು. |
| 2. | ಶ್ರೀ. ಬಿ.ಸಿ. ಶಿವಣ್ಣ ಸ.ಅ | ಕಾರ್ಯದರ್ಶಿ. |
| 3. | ಶ್ರೀ. ಶಿವಕುಮಾರ್ | RI |
| 4. | ಶ್ರೀ. ಜಗದೀಶ್ | ಹಿ.ಆ.ಪ |
| 5. | ಶ್ರೀ. ದೊಡ್ಡವೀರಪ್ಪ ಸ.ಅ | BWSSB |
| 6. | ಶ್ರೀ. ರಾಜಣ್ಣ | BWSSB Inspector |
| 7. | ಶ್ರೀ. ಶಾಂತಕುಮಾರ್ | JHI |
| 8. | ಶ್ರೀ. ಪ. ರಮೇಶ್ | ASI (Police Department) |
| 9. | ಶ್ರೀ. ಮಂಜುನಾಯ್ಕ್ | HC (Police Department) |
| 10. | ಶ್ರೀ. ನಾರಾಯಣ್ ರಾವ್ | ಸಾರ್ವಜನಿಕರು |
| 11. | ಶ್ರೀಮತಿ. ಹೇಮ | ಸಾರ್ವಜನಿಕರು |
| 12. | ಶ್ರೀ. ವೆಂಕಟರಾಮ ರಾಜು | ಸಾರ್ವಜನಿಕರು |
| 13. | ಶ್ರೀ. ಹನುಮಂತ ರಾಜು | SVI |

ವಾರ್ಡಿನ ಕಾರ್ಯದರ್ಶಿಗಳಾದ ಶ್ರೀ.ಬಿ.ಸಿ.ಶಿವಣ್ಣ ರವರು ಅಧ್ಯಕ್ಷರನ್ನೂ ಹಾಗೂ ಹಾಜರಿದ್ದ ಸದಸ್ಯರನ್ನು ಸ್ವಾಗತಿಸಿದರು.

ಬಾಪೂಜಿನಗರದ 3ನೇ ಕ್ರಾಸ್ ಮತ್ತು 5ನೇ ಕ್ರಾಸ್‌ಗಳ ಸಮರ್ಪಕವಾಗಿ ನೀರು ಸರಬರಾಜು ಅಗುತ್ತಿಲ್ಲವೆಂದು ಶ್ರೀ. ಯಶವಂತ್ ರಾವ ರವರು ಸಭೆಯನ್ನು ಸಮಸ್ಯೆ ಬಗೆಹರಿಸಿಕೊಡುವುದಾಗಿ ದೂರವಾಣಿ ಮುಖಾಂತರ ಕೋರಿದರು..

3ನೇ ಕ್ರಾಸ್‌ನಲ್ಲಿ ಕೊಳೆರೆದು ಒಂದು ವರ್ಷ ಮೂರು ತಿಂಗಳಾಗಿದ್ದು ಇದುವರೆವಿಗೂ ಸರ್ವಿಸ್ ಕೊಡದೆ ಸಾರ್ವಜನಿಕರಿಗೆ ಉಪಯೋಗವಾಗುತ್ತಿಲ್ಲವೆಂದು ಶ್ರೀಮತಿ. ಹೇಮ ಸಾರ್ವಜನಿಕರು ದೂರಿದರು.

ಮೇಲಿನ ಸಮಸ್ಯೆಗಳನ್ನು ಈಗ ಕಾರ್ಯನಿರ್ವಹಿಸುತ್ತಿರುವ ಬೋರ್ ವೆಲ್ ಗುತ್ತಿಗೆದಾರರಿಂದ ಸರಿಪಡಿಸಿಕೊಡುವುದಾಗಿ ಕಾರ್ಯದರ್ಶಿಗಳು ತಿಳಿಸಿದರು.

ಶ್ರೀ.ನಾರಾಯಣ ರಾವ್ ರವರು ವಾರ್ಡ್ ನಲ್ಲಿ ಎಷ್ಟು CC Camera ಗಳಿವೇ ? ಅದರಲ್ಲಿ ಎಷ್ಟು ಕಾರ್ಯನಿರ್ವಹಿಸುತ್ತಿವೆ ಅದರ ಬಗ್ಗೆ ಮಾಹಿತಿ ನೀಡಬೇಕೆಂದು ಕೋರಿದರು

ರಂಗ ಮಂದಿರದ ಮೈದಾನದ ಸುತ್ತಮುತ್ತ ಹುಡುಗರು ಅನಾವಶ್ಯಕವಾಗಿ ಓಡಾಡುತ್ತಿದ್ದು ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು ಈಗ ಸ್ವಲ್ಪ ಸಮಸ್ಯೆ ಕಮ್ಮಿಯಾಗಿದೆ. ಬೀಟ್ ಪೋಲಿಸ್ ರವರನ್ನು ಇನ್ನು ಎರಡು ಹೆಚ್ಚಿನ ರೌಂಡ್ ಮಾಡಿಸಿ ಸಮಸ್ಯೆಯನ್ನು ಬಗೆಹರಿಸಿಕೊಡಲು ಎ.ಎಸ್.ಐ ರವರನ್ನು ಸಾರ್ವಜನಿಕರು ಕೋರಿದರು.

ಎ.ಎಸ್.ಐ ರವರು ಒಪ್ಪಿ ಕಾರ್ಯಗತಗೊಳಿಸುವುದಾಗಿ ಸಭೆಗೆ ತಿಳಿಸಿದರು.

ಈಗ ವಾರ್ಡ್‌ನಲ್ಲಿ ಒಂದು Covid ಕೇಸು ಮಾತ್ರ ಚಾಲ್ತಿಯಲ್ಲಿದ್ದು Victoriaya Hospital ದಾಖಲಾಗಿರುತ್ತಾರೆ. ಪ್ರತಿ ದಿನ ವಾರ್ಡ್ ನಲ್ಲಿ 100 ರಿಂದ 125 ಸಂಖ್ಯೆಯ Vaccination ನೀಡಲಾಗುತ್ತಿದೆ ಹಾಗೂ Test ನಡೆಸಲಾಗುತ್ತಿದೆ. ಸದ್ಯದಲ್ಲಿ ಕೋವಿಡ್-19 ನಿಯಂತ್ರಣದಲ್ಲಿ ಇರುತ್ತದೆ ಎಂದು ಶ್ರೀ. ಜಗದೀಶ್ ರವರು ಸಭೆಗೆ ತಿಳಿಸಿದರು.

ಎಚ್ ಕ್ರಾಸ್‌ನಲ್ಲಿ ನೀರು ನಿಂತಿರುವ ಸಮಸ್ಯೆ SWD ಯ Retaining wall ನ Cantering Sheet ಗಳು ತೆಗೆದಿದ್ದು ಒಂದು ರಂಧ್ರದಲ್ಲಿ ಕಬ್ಬಿಣದ ಸರಳುಗಳು ಉಳಿದಿದ್ದು ಆ ರಂಧ್ರಕ್ಕೆ ಚೀಲಗಳನ್ನು ಇಟ್ಟು ಕಾಮಗಾರಿಯನ್ನು ನಿರ್ವಹಿಸಲಾಗಿದೆ. ಈಗ ಆ ಕಂಬಿಗಳಿಗೆ ಇಟ್ಟಿರುವ ಚೀಲಗಳನ್ನು ತೆಗೆದು Manhole ನ ನೀರು ಹರಿಯಲು ಅನುಕೂಲವಾಗುತ್ತದೆಂದು ಶ್ರೀ. ರಾಜಣ್ಣ (BWSSB Inspector) ರವರು SWD ಶ್ರೀಮತಿ. ಇಂದ್ರಾಣಿ ರವರಿಗೆ ತಿಳಿಸಬೇಕೆಂದು ಸಭೆಯಲ್ಲಿ ಅಧ್ಯಕ್ಷರನ್ನು ಕೋರಿದರು. ಅದಕ್ಕೆ ಅಧ್ಯಕ್ಷರು ದೂರವಾಣಿ ಮೂಲಕ ಸಮಸ್ಯೆಯನ್ನು ತಿಳಿಸಿ ಖುದ್ದಾಗಿ ಹಾಜರಾಗಿ ಕ್ರಮಕೈಗೊಳ್ಳಬೇಕೆಂದು ಸೂಚಿಸಿದರು.

ಮೇಲೆ ಸೂಚಿಸಿರುವ ಎಲ್ಲಾ ಆದೇಶಗಳನ್ನು ಪಾಲಿಸಿ ವರದಿಯನ್ನು ಸಲ್ಲಿಸುವುದಾಗಿ ಕಾರ್ಯದರ್ಶಿ ರವರು ತಿಳಿಸಿದರು.

ವಂದನಾರ್ಪಣೆಯನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಬೆಂಗಳೂರು.
ದಿ: 20.03.2021

ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರು
ವಾರ್ಡ್ ಸಂ: 134 AE-134